**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 1**

**ಸಿ.ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು | ವಿಘ್ನೇಶ್ ಸತೀಶ್ ಕುಮಾರ್ |
| ತಂದೆಯ ಹೆಸರು | ಸತೀಶ್ ಕುಮಾರ್ |
| ವಯಸ್ಸು | 34 ವರ್ಷ |
| ಉದ್ಯೋಗ | ಇಂಜಿನಿಯರ್ |
| ವಿಳಾಸ | ಬೆಂಗಳೂರು |

ದಿನಾಂಕಃ 27-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನನಗೆ ಸೇರಿದ ವೋಕ್ಸ್ ವೇಗನ್ ವೆಂಟೋ ಕಾರು ನಂಬ್ರ ಕೆಎ-20-ಪಿ-5464 ಇತ್ತು. ಸದರಿ ಗಾಡಿ ಬೆಂಗಳೂರಿನ ಯಲಹಂಕದ ಜಕ್ಕೂರಿನ ಏರ್ ಪೋರ್ಸ್‌ನ ಪಾರ್ಕಿಂಗ್ ಜಾಗೆಯಲ್ಲಿ ಆಕಸ್ಮಿಕವಾಗಿ ಹತ್ತಿದ ಬೆಂಕಿಯಿಂದಾಗಿ 300 ಕಾರುಗಳು ಸುಟ್ಟು ಹೋಗಿತ್ತು. ಅದರಲ್ಲಿ ನನ್ನದು ಒಂದು ಕಾರು ಆಗಿತ್ತು. ಸದರಿ ವಾಹನಕ್ಕೆ ನಾನು ರೋಡ್ ಟ್ಯಾಕ್ಸ್ ಕಟ್ಟಿದ್ದು, ಸರಕಾರ ವಿಶೇಷ ಯೋಜನೆಯಡಿಯಲ್ಲಿ ಆ ರಸ್ತೆ ಶುಲ್ಕವನ್ನು ಮರುಳಿಸುವುದಾಗಿ ಹೇಳಿತ್ತು. ಅದರಂತೆ ನನಗೆ ರೂಃ 65 ಸಾವಿರ ಹಣ ಬರಬೇಕಾಗಿತ್ತು, ಅದಕ್ಕಾಗಿ ಹಾಳಾಗಿದ್ದ ನನ್ನ ಕಾರು ನೊಂದಣಿಯಾಗಿದ್ದ ಆರ್.ಟಿ.ಓ ದಲ್ಲಿ ಅರ್ಜಿ ಕೊಡುವಂತೆ ತಿಳಿಸಿದ್ದರು. ಆ ಅರ್ಜಿಯೊಂದಿಗೆ ಸುಟ್ಟು ಹೋಗಿದ್ದ ಬಗ್ಗೆ ದಾಖಲಾತಿಯೊಂದಿಗೆ ಎಫ್ಐಆರ್ ನಕಲನ್ನು ಸಹ ಕೊಟ್ಟಿದ್ದೆನು. ನನ್ನ ಕಾರಿನೊಂದಿಗೆ ಕಾರಿನ ದಾಖಲೆ, ನನ್ನ ಚಾಲನಾ ಪರವಾನಿಗೆ ಮತ್ತು ಮನೆಯ ಇತರ ದಾಖಲೆಗಳು ಸಹ ಸುಟ್ಟು ಹೋಗಿತ್ತು. ಅದಕ್ಕಾಗಿ ನಾನು ಉಡುಪಿಯ ಆರ್.ಟಿ.ಓ ಕಚೇರಿಯಲ್ಲಿ ದಿನಾಂಕ 02-03-2019 ರಂದು ನನ್ನ ವಾಹನದ ದಾಖಲೆಗಾಗಿಯೂ ಮತ್ತು ನನ್ನ ಚಾಲನಾ ಪರವಾನಿಗೆಯ ನಕಲಿಗಾಗಿ ಕೋರಿದ್ದೆ. ಆಗ ಸದರಿ ದಾಖಲೆ 15 ದಿನಗಳಲ್ಲಿ ಸಿಗುವುದಾಗಿ ಹೇಳಿದ್ದರು.

2) ಅದರಂತೆ ನಾನು ದಿನಾಂಕ 15-03-2019 ರಂದು ನಾನು, ಚಾಸಾ -2 ಇವರೊಂದಿಗೆ ಉಡುಪಿಯ ಆರ್ ಟಿ ಓ ಕಚೇರಿಗೆ ಹೋಗಿದ್ದೆ. ನಾನು ಕೊಟ್ಟಿದ್ದ ಅರ್ಜಿಯ ಬಗ್ಗೆ ವಿಚಾರಿಸಿದ್ದೆ. ಅವರು ನನಗೆ ಮೇಲೆ ಇರುವ ಅಧಿಕಾರಿ, ಸಿಬ್ಬಂದಿಗಳಲ್ಲಿ ವಿಚಾರಿಸಲು ಹೇಳಿದ್ದರು. ನಾನು ಅಲ್ಲಿ ಹೋಗಿ ವಿಚಾರಿಸಿದಾಗ ಅಲ್ಲಿ ಆರೋಪಿ ಇದ್ದರು. ಅವರನ್ನು ಈದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ. ಅವರಲ್ಲಿ ನಾನು ಕೊಟ್ಟಿದ್ದ ಅರ್ಜಿಯ ಬಗ್ಗೆ ವಿಚಾರಿಸಿದ್ದೆ. ಅವರು ಕಡತವನ್ನು ನೋಡಿ ನನ್ನ ಅರ್ಜಿ ಮಂಜೂರಾಗಿರುವುದಾಗಿಯೂ, ಅದಕ್ಕಾಗಿ ನಾನು ಪಡೆಯಬೇಕಾದ ಹಣದ ಶೇಕಡಾ 10 ರಷ್ಟು ಹಣವನ್ನು ಪಾವತಿಸಬೇಕಾಗುತ್ತದೆ ಎಂದು ಹೇಳಿದರು. ಅದಕ್ಕಾಗಿ ನಾನು ಕೊಡಲು ಆಗುವುದಿಲ್ಲ ಎಂದು ಹೇಳಿದ್ದೆ, ಆಗ ರೂ 4 ಸಾವಿರವಾದರೂ ಕೊಡಲು ಹೇಳಿದ್ದರು. ಆ ಮಾತುಕತೆ ನನ್ನ ಮೊಬೈಲ್ ನಲ್ಲಿ ರೆಕಾರ್ಡ ಆಗಿತ್ತು. ನಾನು ಅದನ್ನು ಅವರ ಬಳಿ ಹೋಗುವಾಗ ಅನ್ ಮಾಡಿ ಇಟ್ಟುಕೊಂಡಿದ್ದೆ. ಆದಿನ ನಾನು ಹಣ ಕೊಡದೆ, ಬರುವುದಾಗಿ ಹೇಳಿ ಬಂದಿದ್ದೆ.

3) ದಿನಾಂಕ 16-03-2019 ರಂದು ನಾನು ಎಸಿಬಿ ಆಫೀಸಿಗೆ ಹೋಗಿ ದೂರನ್ನು ಕೊಟ್ಟಿದ್ದೆ. ಆ ಸಮಯದಲ್ಲಿ ನನ್ನ ಮೊಬೈಲ್ ನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಸಹ ಅವರಿಗೆ ಕೇಳಿಸಿದ್ದೆ. ಆಗ ಅವರು ನನ್ನ ಮೊಬೈಲ್ ನ್ನು ಕೇಳಿದ್ದರು, ಆ ಮೊಬೈಲ್ ನನಗೂ ಬೇಕಾಗುತ್ತಿದ್ದುದರಿಂದ, ನನ್ನ ಮೊಬೈಲ್ ನ್ನು, ನನ್ನ ಲ್ಯಾಪ್ ಟಾಪ್ ಮೂಲಕ, ಸಿಡಿಗೆ ಹಾಕಿಕೊಂಡು, ಆ ಸಂಭಾಷಣೆ ಇರುವ ಸಿಡಿಯನ್ನು ಎಸಿಬಿ ಪೊಲೀಸರಿಗೆ ಕೊಟ್ಟಿದ್ದೆ. ನಾನು ಕೊಟ್ಟಿದ್ದ ದೂರು ಮತ್ತು ಸಿಡಿಯನ್ನು ಗುರುತಿಸಬಲ್ಲೆ. ಸದರಿ ದೂರನ್ನು ಈಗ ನೋಡಿ ಅದನ್ನು ನಿಶಾನೆ ಪಿ-1 ಎಂದು ಗುರುತಿಸಿದ್ದೇನೆ, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಿದ್ದೇನೆ. ಆದಿನ ನಾನು ಕೊಟ್ಟಿದ್ದ ಸಿಡಿಯನ್ನು ನೋಡಿದರೆ ಗುರುತಿಸಬಲ್ಲೆ.

4) ಆದಿನ ತನಿಖಾಧಿಕಾರಿ ಇಬ್ಬರು ಪಂಚ ಸಾಕ್ಷಿಗಳು ಬೇಕೆಂದು ಚಾಸಾ -4 ಮತ್ತು 5 ಇವರನ್ನು ಠಾಣೆಗೆ ಕರೆಸಿದ್ದರು. ಅವರಿಗೆ ಪೊಲೀಸರು ಮಾಡಬೇಕಾಗಿದ್ದ ಕ್ರಮದ ಬಗ್ಗೆ ಹೇಳಿದ್ದರು. ಮತ್ತು ನಾನು ಕೊಡಬೇಕಾಗಿದ್ದ ಹಣವನ್ನು ನನ್ನಿಂದ ಕೇಳಿ ತೆಗೆದುಕೊಂಡು ಅದಕ್ಕೆ ಫಿನಾಪ್ತಲೀನ್ ಪುಡಿಯನ್ನು ಪೊಲೀಸರು ಹಚ್ಚಿದ್ದರು. ಆ ನೋಟುಗಳ ವಿವರಗಳನ್ನು ಚಾಸಾ-4 ಬರೆದುಕೊಂಡಿದ್ದರು. ಸಿಡಿಯನ್ನು ಪೊಲೀಸರು

ಹಾಕಿ ಕೇಳಿಸಿದ್ದರು. ಅದನ್ನು ಪೊಲೀಸರು ಮತ್ತು ಚಾಸಾ-4 ಕೇಳಿದ್ದರು. ಆದಿನ ಕೇಳಿಸಿದ್ದ ಸಿಡಿಯನ್ನು ನೋಡಿ, ಅದನ್ನು **ಎಂಒ-1** ಎಂದು ಗುರುತಿಸಿದ್ದೇನೆ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಸಿಡಿಯ ನಕಲನ್ನು ಅಂತಿಮ ವರದಿಯೊಂದಿಗೆ ನೀಡಿಲ್ಲ ಎಂದು, ಅದರ ಪ್ರತಿ ಒಂದನ್ನು ಬೇಕು ಎಂದು ಕೇಳಿರುತ್ತಾರೆ. ಸದರಿ ಸಿಡಿಯ ಸಂಬಾಷಣೆ ಪಂಚನಾಮೆಯಲ್ಲಿರುವುದಾಗಿ ವಿಶೇಷ ಅಭಿಯೋಜಕರು ಹೇಳಿರುತ್ತಾರೆ)

5) ನಂತರ ಸೋಡಿಯಂ ಕಾರ್ಬೋನೇಟ್ ನ ದ್ರಾವಣ ಮಾಡಿದ್ದರು. ಅದು ಬಣ್ಣ ರಹಿತವಾಗಿತ್ತು. ಸದರಿ ದ್ರಾವಣದ ಒಂದು ಭಾಗವನ್ನು ಸೀಸೆಯಲ್ಲೆ ಹಾಕಿ, ಅದಕ್ಕೆ ಸೀಲು ಹಾಕಿ ತೆಗೆದು ಇಟ್ಟಿದ್ದರು. ಅದನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಸೀಸೆಯ ಮೇಲಿನ ಸಾಕ್ಷಿದಾರರು ಸಹಿಯನ್ನು ನೋಡಿ ಗುರುತಿಸಿ, ಎಫ್ ಎಸ್ ಎಲ್ ಸೀಲು ಇರುವ ಪ್ಯಾಕ್ ನಿಂದ ತೆಗೆದ ಸೀಸೆಯನ್ನು, ಸಾಕ್ಷಿಯು ಗುರುತಿಸಿದ್ದು ಅದನ್ನು **ಎಂಒ-2** ಎಂದು ಗುರುತಿಸಿದೆ.

6) ನಂತರ ಉಳಿದ ದ್ರಾವಣದಲ್ಲಿ ನೋಟು ಮುಟ್ಟಿದ್ದ ಚಾಸಾ -5 ಇವರ ಕೈಗಳನ್ನು ಆ ದ್ರಾವಣದಲ್ಲಿ ಅದ್ದಿದ್ದರು, ಆಗ ದ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಆ ದ್ರಾವಣವನ್ನು ಇನ್ನೊಂದು ಸೀಸೆಗೆ ಹಾಕಿ ಮುಚ್ಚಿದ್ದರು. ಆ ಸೀಸೆಯನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಸೀಸೆಯ ಮೇಲಿನ ಸಾಕ್ಷಿದಾರರು ಸಹಿಯನ್ನು ನೋಡಿ ಗುರುತಿಸಿ, ಎಫ್ ಎಸ್ ಎಲ್ ಸೀಲು ಇರುವ ಪ್ಯಾಕ್ ನಿಂದ ತೆಗೆದ ಸೀಸೆಯನ್ನು, ಸಾಕ್ಷಿಯು ಗುರುತಿಸಿದ್ದು ಅದನ್ನು ಎಂಒ-3 ಎಂದ ಗುರುತಿಸಿದೆ.

7) ಅಲ್ಲಿಯೇ ಪೊಲೀಸರ ಬಳಿಯಲ್ಲಿ ಇದ್ದ ಆಡಿಯೋ ರೆಕಾರ್ಡ್‌ನ್ನು ನನ್ನ ಜೇಬಿನಲ್ಲಿ ಇಟ್ಟುಕೊಂಡು ಹೇಗೆ ಬಳಸಬೇಕೆಂದು ತೋರಿಸಿದ್ದರು ಮತ್ತು ಅದರಲ್ಲಿ ಯಾವುದೇ ರೆಕಾರ್ಡಿಂಗ್ ಇಲ್ಲ ಎಂಬುದನ್ನು ತೋರಿಸಿದ್ದರು. ರೂಃ 4 ಸಾವಿರಗಳ (2000 ರೂಗಳ ಎರಡು ನೋಟುಗಳು) ಹಣವನ್ನು ನನ್ನ ಶರ್ಟ್‌ನ ಜೇಬಿನಲ್ಲಿ ಇಟ್ಟಿದ್ದರು. ಆ ಹಣವನ್ನು ಆಪಾದಿತ ನೌಕರರು ಕೇಳಿದಾಗ ಕೊಡಲು ಹೇಳಿದ್ದರು. ಆ ಸಮಯದಲ್ಲಿ ಪೊಲೀಸರು ಪಂಚನಾಮೆಯನ್ನು ಬರೆದು, ನನ್ನ ಸಹಿ ಪಡೆದಿದ್ದರು. ಆಗ ವಿಡಿಯೋ ಸಹ ಮಾಡಿದ್ದರು. ಆದಿನ ಬರೆದ ಪಂಚನಾಮೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-2 ಎಂದು ಗುರುತಿಸಿದ್ದೇನೆ. ಅದಕ್ಕೆ ಚಾಸಾ -5 ಮತ್ತು 6 ಸಹ ಸಹಿ

ಮಾಡಿದ್ದರು. ನಿಪಿ-2 ರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-2(ಎ) ಎಂದು ಗುರುತಿಸಿದ್ದೇನೆ. ಇದಾದ ನಂತರ ನಾವೆಲ್ಲಾ ಕೈಗಳನ್ನು ಸೋಪ್ ನಿಂದ ತೊಳೆದುಕೊಂಡಿದ್ದೆವು. ಆಗ ಸಮಯ ಸುಮಾರು 11-30 ಗಂಟೆ ಆಗಿತ್ತು.

8) ನಂತರ ನಾನು, ಚಾಸಾ -4, ಮತ್ತು ಒಬ್ಬ ಪೊಲೀಸರು ಮೊದಲು ಆರೋಪಿತರ ಕಚೇರಿಗೆ ಹೋಗಿದ್ದೆವು. ನಾನು ಮತ್ತು ಚಾಸಾ-4 ಮಾತ್ರವೇ ಕಚೇರಿಯ ಒಳಗೆ ಹೋಗಲು ಸೂಚಿಸಿದ್ದರು ಅದರಂತೆ ನಾವು ಹೋಗಿ ನೋಡಿದಾಗ ಅಲ್ಲಿ 1 ನೇ ಅರೋಪಿ ಇರಲಿಲ್ಲ. ಅವರ ಪಕ್ಕದಲ್ಲಿಯೇ ಇದ್ದ ಇನ್ನೊಬ್ಬ ಸಿಬ್ಬಂದಿಯನ್ನು ಕೇಳಿದಾಗ, ಊಟಕ್ಕೆ ಹೋಗಿರುವುದಾಗಿ ಹೇಳಿದ್ದರು. ನಂತರ ನಾನು 2-15 ಗಂಟೆಗೆ ಚಾಸಾ -4 ಈತನೊಂದಿಗೆ ಹೋಗಿದ್ದೆ. ಆಗ 1 ನೇ ಅರೋಪಿ ಕಚೇರಿಯಲ್ಲಿದ್ದರು. ನಾನು ಮತ್ತು ಚಾಸಾ -4, ಆರೋಪಿಯ ಕೋಣೆಗೆ ಹೋಗಿದ್ದೆವು. ಅಲ್ಲಿ ನಾನು ಅವರ ಟೇಬಲ್ ಮುಂದೆ ಅವರು ಕೇಳಿದ್ದ ಹಣ ಎಂದು ಹೇಳಿ ಕೊಟ್ಟಿದ್ದೆ. ಅವರು ಎಷ್ಟು ಹಣ ಎಂದು ಕೇಳಿದ್ದರು. ನಾನು 4 ಸಾವಿರ ಎಂದಿದ್ದೆ. ಅವರು ಅದನ್ನು ಲೆಕ್ಕ ಮಾಡಿ ತೆಗೆದುಕೊಂಡಿದ್ದರು ಮತ್ತು ನನಗೆ ನನ್ನ ಡಿಡಿ ಬರುತ್ತದೆ ಎಂದು ತಿಳಿಸಿದ್ದರು. ನಾನು ಹೊರಗೆ ಬಂದು ಪೊಲೀಸರು ಹೇಳಿದಂತೆ, ಹಣೆಗೆ ಖರ್ಚಿಪ್ ನಿಂದ ಒರೆಸಿಕೊಳ್ಳುವಂತೆ ತೋರಿಸಿದ್ದೆ. ಕೂಡಲೇ ಅಲ್ಲಿ ಇದ್ದ ಪೊಲೀಸರು ಬಂದಿದ್ದರು. ಅವರಿಗೆ ನಾನು ಹಣ ಕೊಟ್ಟಿದ್ದ ಬಗ್ಗೆ ಹೇಳಿದ್ದೆ. ಆಗ ನನ್ನೊಂದಿಗೆ ಇದ್ದ ಚಾಸಾ -4 ಇವರಿಗೂ ಸಹ ವಿಚಾರಿಸಿದ್ದರು. ಅವರು ನಡೆದ ವಿಷಯದ ಬಗ್ಗೆ ಹೇಳಿದ್ದರು.

9) ಆಗ ಪೊಲೀಸರು 1 ನೇ ಅರೋಪಿಯ ಕೋಣೆಗೆ ಹೋಗಿ ಅವರು ಎಸಿಬಿ ಪೊಲೀಸ್ ಇರುವುದಾಗಿ, ಕೇಸ್ ದಾಖಲಾಗಿರುವ ಬಗ್ಗೆ ಹೇಳಿದ್ದರು. ಪೊಲೀಸರು ಆರೋಪಿಯ ಕೈಯನ್ನು ಹಿಂದಿನಿಂದ ಹಿಡಿದಿದ್ದರು. ಆರೋಪಿತನನ್ನು ವಿಚಾರಿಸಲಾಗಿ ಅಲ್ಲಿ ಹಣ ಇಲ್ಲ ಎಂದು ಹೇಳಿದ್ದರು. ಅದಕ್ಕಾಗಿ ಪೊಲೀಸರು, ಅಲ್ಲಿ ಇದ್ದ ಸಿಸಿ ಟಿವಿ ಡಿವಿಡಿಯನ್ನು ನೋಡಿದ್ದರು. ಅಲ್ಲಿ ನೋಡಿದಾಗ ಇದ್ದ ವ್ಯಕ್ತಿಯನ್ನು ಕರೆಸಲು ಆರೋಪಿಗೆ ಹೇಳಿದ್ದರು. ಅದರಂತೆ ಬಂದಿದ್ದ ಆತನ ಕೈಯನ್ನು ಸಹ ಹಿಡಿದಿದ್ದರು ಮತ್ತು ಆತನ ಬಳಿ ಹಣಕ್ಕಾಗಿ ಕೇಳಿದ್ದರು. ಆಗ ಆತ ಆ ಹಣ ಟ್ರಾನ್ಸಪೋರ್ಟ್ ವಿಭಾಗದ ಇನ್ನೊಂದು ಕೋಣೆಯ ಕಪಾಟಿನಲ್ಲಿರುವುದಾಗಿ, ಹೇಳಿ ಕರೆದುಕೊಂಡು ಹೋಗಿ, ತೆಗೆದು ಪೊಲೀಸರಿಗೆ ಕೊಟ್ಟಿದ್ದರು. ಆಗ ಅಲ್ಲಿ ಚಾಸಾ -5 ಸಹ ಇದ್ದರು.

10) ಆ ಸಮಯದಲ್ಲಿ ಒಂದು ಕಡತದಿಂದ ನಾನು ಕೊಟ್ಟಿದ್ದ ಹಣವನ್ನು ತೆಗೆದುಕೊಂಡಿದ್ದರು. ಆ ಹಣವನ್ನು ಪುನಃ ತಪಾಸು ಮಾಡಿ ಗುರುತಿಸಿಕೊಂಡಿದ್ದರು ಮತ್ತು ಆ ಜಾಗೆಯಲ್ಲಿ ಇಟ್ಟಿದ್ದ ಬೇರೆ ಹಣವನ್ನು ಸಹ ಜಪ್ತು ಮಾಡಿದ್ದರು.

11) ಪೊಲೀಸರು ಅಲ್ಲಿ ಪುನಃ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದ್ದರು. ಆ ದ್ರಾವಣದ ಒಂದು ಮಾದರಿಯನ್ನು ಸೀಸೆಯಲ್ಲಿ ತೆಗೆದಿದ್ದರು. ಅದಕ್ಕೆ ಪ್ರತ್ಯೇಕವಾಗಿ ಸೀಲು ಮಾಡಿದ್ದರು. ಈಗ ತೋರಿಸಿದ ಸೀಸೆಯ ಮೇಲಿನ ಸಹಿಯನ್ನು ಸಾಕ್ಷಿದಾರರು ಗುರುತಿಸಿದ್ದು, ಅದರ ಮೇಲೆ ಎಫ್.ಎಸ್.ಎಲ್., ಸೀಲು ಇದ್ದು, ತೆಗೆದು ನೋಡಿ, ಆ ಸೀಸೆಯನ್ನು **ಎಂಒ-4** ಎಂದು ಗುರುತಿಸಿರುತ್ತಾರೆ.

12) ನಂತರ 1 ನೇ ಅರೋಪಿತನ ಎರಡು ಕೈಗಳನ್ನು ಬೇರೆ ಬೇರೆ ಬಟ್ಟಲು ಗಳಲ್ಲಿ ಮುಳುಗಿಸಿದಾಗ ದ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಆ ದ್ರಾವಣವನ್ನು ಪುನಃ ಎರಡು ಸೀಸೆಗಳಲ್ಲಿ ಹಾಕಿ, ಸೀಲು ಮಾಡಿದ್ದರು.ಆಗ ನನ್ನ ಸಹಿ ಪಡೆದಿದ್ದರು. ಎಪ್.ಎಸ್.ಎಲ್ ಸೀಲು ಇರುವ ಪ್ಯಾಕ್ ಗಳಿಂದ ತೆಗೆದ ಎರಡು ಸೀಸೆಗಳನ್ನು ಸಾಕ್ಷಿ ಗುರುತಿಸಿ ಅವುಗಳನ್ನು **ಎಂಒ-5 ಮತ್ತು 6** ಎಂದು ಗುರುತಿಸಿದೆ.

13) ನಂತರ ಪೊಲೀಸರು ಪುನಃ ಎರಡು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋರ್ನೇಟ್ ದ್ರಾವಣವನ್ನು ತಯಾರಿಸಿಕೊಂಡು, ಅದರಲ್ಲಿಯ ಮಾದರಿಯನ್ನು ಒಂದು ಸೀಸೆಗೆ ತೆಗೆದಿದ್ದರು, ಆಗ ದ್ರಾವಣ ಬಣ್ಣ ರಹಿತವಾಗಿತ್ತು. ಆ ಸೀಸೆಯನ್ನು ಸೀಲು ಮಾಡಿ, ಇಟ್ಟಿದ್ದರು. ಸಾಕ್ಷಿಗೆ ಸದರಿ ಪ್ಯಾಕ್ ಮೇಲಿನ ಚೀಟಿಯಲ್ಲಿಯ ಸಹಿಯನ್ನು ಗುರುತಿಸಿದ್ದು, ಎಪ್ ಎಸ್ ಎಲ್ ಸೀಲು ಇರುವ ಪ್ಯಾಕ್ ನ್ನು ತೆಗೆದ ಸೀಸೆಯನ್ನು ನೋಡಿ ಅದನ್ನು **ಎಂಒ-7** ಎಂದು ಗುರುತಿಸಿದೆ.

14) ನಂತರ 2 ನೇ ಅರೋಪಿತನ ಎರಡು ಕೈಗಳನ್ನು ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ಮುಳುಗಿಸಿದ್ದರು. ಆಗ ದ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಅದನ್ನು ಪ್ರತ್ಯೇಕ ಸೀಸೆಗಳಲ್ಲಿ ಹಾಕಿ ಸೀಲು ಮಾಡಿದ್ದರು. ಈಗ ಸಾಕ್ಷಿಯು ಸೀಲು ಮಾಡಿದ ಪ್ಯಾಕ್ ಮೇಲೆ ಅಂಟಿಸಿದ ಚೀಟಿಗಳಲ್ಲಿಯ ಸಹಿಯನ್ನು ನೋಡಿ ಗುರುತಿಸಿ, ಎಫ್ ಎಸ್ ಎಲ್ ಸೀಲು ಇರುವ ಪ್ಯಾಕ್ ನ್ನು ತೆಗೆದು ಸೀಸೆಗಳನ್ನು ನೋಡಿ ಅದನ್ನು **ಎಂಒ-8 ಮತ್ತು 9** ಎಂದು ಗುರುತಿಸಿದೆ.

15) ಆದಿನ ಸಿಕ್ಕಿದ್ದ ಹಣವನ್ನು ಸಹ ಪ್ರತ್ಯೇಕವಾಗಿ ಎಣಿಕೆ ಮಾಡಿ, ಜಪ್ತು ಮಾಡಿದ್ದರು. ಆದಿನ ಸಿಕ್ಕ ಹಣ ರೂಃ 30,670.00 ಆಗಿತ್ತು. ಆ ಹಣವನ್ನು ನೋಡಿದರೆ ಗುರುತಿಸಬಲ್ಲೆ. ನಾನು ಕೊಟ್ಟಿದ್ದ ಹಣವನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿದ್ದರು. ಆ ಹಣವನ್ನು ನೋಡಿದರೆ ಗುರುತಿಸಬಲ್ಲೆ. ಈಗ ಆರ್. ಎಫ್. ಎಸ್. ಎಲ್ ., ಸೀಲು ಇರುವ ಕವರ್ ನಿಂದ ತೆಗೆದ ನೋಟುಗಳನ್ನು ಸಾಕ್ಷಿದಾರರು ಗುರುತಿಸಿದ್ದು, ಅವುಗಳನ್ನು **ಎಂಓ-10** ಎಂದು ಗುರುತಿಸಿದೆ.

16) ನಂತರ ನನ್ನ ಬಳಿಯಲ್ಲಿದ್ದ ಅಡಿಯೋ ರೆಕಾರ್ಡ್ ರನ್ನು ತೆಗೆದುಕೊಂಡು ಕೇಳಿಸಿಕೊಂಡಿದ್ದರು ಮತ್ತು ಅದರಲ್ಲಿದ್ದ ಸಂಭಾಷಣೆಯನ್ನು ಬರೆದಿದ್ದರು. ಅದನ್ನು ನನಗೂ ಸಹ ತೋರಿಸಿದ್ದರು. ನಾನು ಅದನ್ನು ನೋಡಿ ಸಹಿ ಮಾಡಿದ್ದೆ. ಅಲ್ಲಿ ಮಾಡುತ್ತಿದ್ದ ಎಲ್ಲಾ ಪ್ರಕ್ರಿಯೆಗಳನ್ನು ಪೊಲೀಸರು ಪೋಟೋ ಮತ್ತು ವಿಡಿಯೋ ಸಹ ಮಾಡಿದ್ದರು. ಆ ರೀತಿಯ ಪೋಟೋ ಮತ್ತು ವಿಡಿಯೋವನ್ನು ಎಲ್ಲಾ ಪ್ರಕ್ರಿಯೆಗಳಲ್ಲಿ ಮಾಡಿದ್ದರು.

17) ಅಲ್ಲಿಗೆ ಪೊಲೀಸರು 1 ನೇ ಅರೋಪಿತನ ಸಹೋದ್ಯೋಗಿ ಚಾಸಾ-3 ಇವರನ್ನು ಕರೆತಂದು, ಅವರಿಗೆ ತನಿಖೆಯ ಬಗ್ಗೆ ಮಾಹಿತಿ ನೀಡಿದ್ದರು. ಅವರಿಗೆ ನನ್ನ ಬಳಿ ಇದ್ದ ಅಡಿಯೋ ರೆಕಾರ್ಡ್ ರನ್ನು ಕೇಳಿಸಿದ್ದರು. ಅದರಲ್ಲಿದ್ದ 1 ನೇ ಅರೋಪಿಯ ಧ್ವನಿಯನ್ನು ಚಾಸಾ -3 ಗುರುತಿಸಿದ್ದರು. ಆ ಅಡಿಯೋ ರೇಕಾರ್ಡರನ್ನು ಪೊಲೀಸರ ಬಳಿ ಇದ್ದ ಲ್ಯಾಪ್ ಟಾಪ್ ಗೆ ಸಂಪರ್ಕಿಸಿ, ಅದರಲ್ಲಿದ್ದ ಸಂಭಾಷಣೆಯನ್ನು ಸಿಡಿಗೆ ಲ್ಯಾಪ್ ಟಾಪ್ ಮೂಲಕ ವರ್ಗಾಯಿಸಿದ್ದರು. ಆಗ ಆ ಸಿಡಿಯನ್ನು ಪೊಲೀಸರು ನನಗೆ, ಚಾಸಾ -3, ಚಾಸಾ-4 ಇವರಿಗೂ ಸಹ ಕೇಳಿಸಿದ್ದರು. ಅಲ್ಲಿಯೇ ಪೊಲೀಸರು ಇಬ್ಬರೂ ಆರೋಪಿತರನ್ನು ವಿಚಾರಿಸಿದ್ದರು. ಆಗ ಅವರು ಕೊಟ್ಟ ಹೇಳಿಕೆಯನ್ನು ಆರೋಪಿತರೇ ಬರೆದು ಕೊಟ್ಟಿದ್ದರು. ಚಾಸಾ-3 ಸಂಭಾಷಣೆಯನ್ನು ಕೇಳಿ ಧ್ವನಿ ಗುರುತಿಸಿದ್ದಕ್ಕಾಗಿ ಅವರ ಸಹಿಯನ್ನು ಸಹ ಪಡೆದಿದ್ದರು.

18) ನಾನು ಆರೋಪಿತನ ಕಚೇರಿಗೆ ಸಲ್ಲಿಸಿದ್ದ ಅರ್ಜಿಗಳ ಕಡತವನ್ನು ಸಹ ಪೊಲೀಸರು ತೆಗೆಸಿ ನೋಡಿದ್ದರು. ಆ ಕಡತದಲ್ಲಿಯ ದಾಖಲೆಗಳನ್ನು ಜಪ್ತು ಮಾಡಿದ್ದರು. ಅದು 95 ಪುಟಗಳ ಕಡತವಾಗಿದ್ದು, ಆ ಕಡತವನ್ನು ಈಗ ನೋಡಿ ನಿಶಾನೆ ಪಿ-3 ಎಂದು ಗುರುತಿಸಿದ್ದೇನೆ.

19) ಆದಿನ 1 ನೇ ಅರೋಪಿ ಇದ್ದ ಕೋಣೆಯ ಸಿಸಿ ಟಿವಿಯ ರೆಕಾರ್ಡಿಂಗ್ ನ್ನು ಸಹ ಆದಿನ ಪೊಲೀಸರು ಪಡೆದಿದ್ದರು ಮತ್ತು 2 ನೇ ಆರೋಪಿಗೆ ಸಂಬಂಧಪಟ್ಟಂತೆ, ನಾನು ಕೊಟ್ಟ ಹಣವನ್ನು 2 ನೇ ಆರೋಪಿ ಇನ್ನೊಂದು ಕೋಣೆಗೆ ತೆಗೆದುಕೊಂಡು ಹೋಗಿದ್ದ ಬಗ್ಗೆ, ಇದ್ದ ಸಿಸಿ ಟಿವಿಯ ಫೂಟೇಜ್ ನ್ನು 1 ನೇ ಆರೋಪಿಯ ಕಚೇರಿಯ ಸಿಬ್ಬಂದಿ ಚಾಸಾ -6 ಇವರಿಂದ ಪಡೆದಿದ್ದರು. ಪೊಲೀಸರು ಹಣ ಇಟ್ಟ ಜಾಗೆಯ ಬಗ್ಗೆ ನನ್ನನ್ನು ವಿಚಾರಿಸಿದ್ದರು. ಆ ಜಾಗೆಯನ್ನು ತೋರಿಸಿದಾಗ, ಅಲ್ಲಿ ಹತ್ತಿಯಿಂದ ಒರೆಸಿಕೊಂಡು, ಆ ಹತ್ತಿಯನ್ನು ಸಹ ಜಪ್ತು ಮಾಡಿದ್ದರು. ಅದಕ್ಕಾಗಿ ವಿವರವಾದ ಪಂಚನಾಮೆಯನ್ನು ಬರೆದು, ನನಗೆ ತೋರಿಸಿ, ನಾನು ಓದಿಕೊಂಡು, ನೋಡಿ, ಸಹಿ ಮಾಡಿದ್ದೆ. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-4 ಎಂದು , ಅದರಲ್ಲಿಯ ನನ್ನ ಸಹಿ ಪ್ರತಿ ಪುಟಕ್ಕೂ ಇದ್ದು, ಅದರಲ್ಲಿಯ ಕೊನೆಯ ಪುಟದಲ್ಲಿನ ನನ್ನ ಸಹಿಯನ್ನು ನಿಶಾನೆ ಪಿ-4(ಎ) ಎಂದು ಗುರುತಿಸಿದ್ದೇನೆ. ನಿಶಾನೆ ಪಿ-2 ರ ಸಮಯದಲ್ಲಿ ತೆಗೆದಿದ್ದ 32 ಪೋಟೋಗಳನ್ನು ಈಗ ನೋಡಿ ನಿಶಾನೆ ಪಿ-5 ಎಂದು ಗುರುತಿಸಿದ್ದೇನೆ. ನಿಶಾನೆ ಪಿ-4 ರ ಸಮಯದಲ್ಲಿ ತೆಗೆದಿದ್ದ 30 ಪೋಟೋಗಳನ್ನು ಈಗ ನೋಡಿ ನಿಶಾನೆ ಪಿ-6 ಎಂದು ಗುರುತಿಸಿದ್ದೇನೆ.

**(ಪಾಟಿ ಸವಾಲನ್ನು ವೇಳೆ ಕೋರಿದ್ದರಿಂದ ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ